| ಸರ್ಕಾರಿ ಪ್ರೌಢಶಾಲೆ ಚಿಕ್ಕಜಾಲ ಬೆಂಗಳೂರು ಉತ್ತರ ವಲಯ-04<br>ಸಂಕಲನಾತ್ಮಕ ಮೌಲ್ಯಮಾಪನ 02,ಮಾರ್ಚ್ 2016<br>9 ನೇ ತರಗತಿ ವಿಷಯ :ಸಮಾಜವಿಜ್ಞಾನ ಸಮಯ :3 ಗಂ. | |
|---|---|
| **ಹೆಸರು:** | **ರಿ.ನಂ.** |
| **ಅಂಕಗಳು:90** | **ಪಡೆದ ಅಂಕ :** |
| **ಕೊಠಡಿ ಮೇಲ್ವಿಚಾರಕರ ಸಹಿ** | **ಮೌಲ್ಯಮಾಪಕರ ಸಹಿ** |

**I. ಈ ಕೆಳಗಿನ ಪ್ರಶ್ನೆಗಳಿಗೆ ಸೂಕ್ತವಾದ ಉತ್ತರವನ್ನು ಆರಿಸಿ, ಉತ್ತರ ಬರೆಯಲು ಕೊಟ್ಟಿರುವ ಜಾಗದಲ್ಲಿಯೇ ಕ್ರಮಾಕ್ಷರಗಳೊಂದಿಗೆ ಪೂರ್ಣ ಉತ್ತರಗಳನ್ನು ಬರೆಯಿರಿ.** 10x1=10

1. 'ಭಕ್ತಿಯಿಂದ ಮನುಷ್ಯನು ಪರಿಶುದ್ಧನಾಗುತ್ತಾನೆ' ಎಂದು ಉಪದೇಶ ಮಾಡಿದವರು
   a)ಚೈತನ್ಯ b)ಗುರುನಾನಕ್ c)ಬಸವೇಶ್ವರ d)ಕಬೀರ್

   ____________________________________________
2. ಭಾರತಕ್ಕೆ ಜಲಮಾರ್ಗವನ್ನು ಕಂಡುಹಿಡಿದವರು.
   (a)ಮೆಗಲಾನ್ (b) ವಾಸ್ಕೋ-ಡ-ಗಾಮ (c)ಕೋಲಂಬಸ್ (d)ಕಬ್ರಾಲ್

   ____________________________________________
3. ವಿಜಯನಗರ ಸಾಮ್ರಾಜ್ಯ ಸ್ಥಾಪನೆಯಾದ ವರ್ಷ
   (a)ಕ್ರಿ.ಶ.1347 (b)ಕ್ರಿ.ಶ.1336 (c)ಕ್ರಿ.ಶ.1565 (d)ಕ್ರಿ.ಶ.1358

   ____________________________________________
4. ರಕ್ತ ಮತ್ತು ಕಬ್ಬಿಣ ತತ್ವವನ್ನು ಪ್ರತಿಪಾದಿಸಿದವರು.
   (a)ರೂಸೋ (b)ಗ್ಯಾರಿಬಾಲ್ಡಿ (c)ಮ್ಯಾಜಿನಿ (d)ಬಿಸ್ಮಾರ್ಕ್

   ____________________________________________
5. 'ಅದ್ವೈತ ಸಿದ್ಧಾಂತ'ದ ಪ್ರತಿಪಾದಕರು
   (a)ಬಸವೇಶ್ವರ (b)ಮಧ್ವಾಚಾರ್ಯ (c)ಸರ್ವಜ್ಞ (d)ಶಂಕರಾಚಾರ್ಯ

   ____________________________________________
6. ತರೈನ್ ಯುದ್ಧಗಳು ನಡೆದದ್ದು ಇವರ ನಡುವೆ
   (a)ಬಾಬರ್-ಇಬ್ರಾಹಿಂ ಲೂದಿ (b)ಪೃಥ್ವಿರಾಜ ಚೌಹಾಣ್-ಘೋರಿ ಮಹಮ್ಮದ್
   (c)ಅಕ್ಬರ್-ಹೇಮು (d)ಬಾಬರ್-ಘೋರಿ ಮಹಮ್ಮದ್

   ____________________________________________
7. ದೆಹಲಿಯಲ್ಲಿರುವ ಕೆಂಪು ಕೋಟೆಯನ್ನು ನಿರ್ಮಿಸಿದ ಮೊಘಲ್ ಸುಲ್ತಾನ
   (a)ಬಾಬರ್ (b)ಜಹಂಗೀರ್ (c)ಅಕ್ಬರ್ (d)ಷಾಜಹಾನ್

_______________________________________________

8. ಲೋಕಸಭೆಯ ಈಗಿನ ಒಟ್ಟು ಸದಸ್ಯರ ಸಂಖ್ಯೆ
(a)545 (b)225 (c)75(d)250

_______________________________________________

9. ಕರ್ನಾಟಕದಲ್ಲಿ ಅತೀ ಹೆಚ್ಚು ಕಬ್ಬು ಉತ್ಪಾದಿಸುವ ಜಿಲ್ಲೆ
(a)ಮಂಡ್ಯ (b)ಮೈಸೂರು (c)ದಾವಣಗೆರೆ (d)ಬೆಳಗಾವಿ

_______________________________________________

10. ಭಾರತದಲ್ಲಿ ಮೊಟ್ಟ ಮೊದಲ ಷೇರುಮಾರುಕಟ್ಟೆ ಆರಂಭವಾದ ಸ್ಥಳ
(a)ಮುಂಬೈ (b)ಕೊಲ್ಕತ್ತಾ (c)ಮೈಸೂರು (d)ಬೆಂಗಳೂರು

_______________________________________________

**II.ಖಾಲಿ ಬಿಟ್ಟ ಜಾಗಗಳನ್ನು ಸೂಕ್ತ ಉತ್ತರದೊಂದಿಗೆ ತುಂಬಿರಿ** **5x1=5**

11.ಭಾರತೀಯ ಸಮಾಜದ ಆಧಾರಸ್ತಂಭ __________________________ಸಮುದಾಯವಾಗಿದೆ.

12.ಕಾರ್ಮಿಕನ ಸೀಮಾಂತ ಉತ್ಪಾದನೆ ಶೂನ್ಯವಾಗಿದ್ದಾಗ ಅದನ್ನು ___________________ಎನ್ನುತ್ತಾರೆ.

13.ಕಾವೇರಿ ನದಿಯು ಕೊಡಗು ಜಿಲ್ಲೆಯ ____________________ಎಂಬಲ್ಲಿ ಉಗಮ ಹೊಂದುತ್ತದೆ.

14.ಅತಿ ಹೆಚ್ಚು ಅರಣ್ಯ ಪ್ರದೇಶವನ್ನು ಹೊಂದಿರುವ ಜಿಲ್ಲೆ_____________________________

15.ಮಧುರಾ ವಿಜಯಂ ಕೃತಿಯನ್ನು ಬರೆದ ಕವಯತ್ರಿ _____________________________

**III.16.ಹೊಂದಿಸಿ ಬರೆಯಿರಿ** **1x5=5**

| A | B | ಉತ್ತರಗಳು |
|---|---|---|
| 1.ನಾಗರಹೊಳೆ | a)ಅರಮನೆಗಳ ನಗರ | |
| 2.ಶ್ರೀಗಂಧದ ಮರ | b)ಜಲವಿದ್ಯುತ್ ಯೋಜನೆ | |
| 3.ನಾಗಝರಿ | c)ಉತ್ತರ ಕನ್ನಡ ಜಿಲ್ಲೆ | |
| 4.ಯಾಣ | d)ರಾಷ್ಟ್ರೀಯ ಉದ್ಯಾನವನ | |
| 5.ಮೈಸೂರು | e)ಎಲೆ ಉದುರಿಸುವ ಕಾಡುಗಳು | |
| | f)ಮರುಭೂಮಿ ಸಸ್ಯವರ್ಗ | |

**IV. ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ** **14x1=14**

17.ಶಿವಾಜಿಗೆ ಆಡಳಿತದಲ್ಲಿ ಆಡಳಿತದಲ್ಲಿ ಸಹಾಯಕರಾಗಿದ್ದ ಮಂತ್ರಿಮಂಡಲಕ್ಕೆ ಏನೆಂದು ಕರೆಯುತ್ತಿದ್ದರು?

______________________________________________

18.ಮೊದಲನೆ ಪಾಣಿಪತ್ ಕದನವು ದೆಹಲಿ ಸುಲ್ತಾನರ ಆಡಳಿತವನ್ನು ಕೊನೆಗೊಳಿಸಿತು.ಹೇಗೆ?

______________________________________________

______________________________________________

19.ದೆಹಲಿ ಸುಲ್ತಾನರ ಆಡಳಿತದಲ್ಲಿ ರಜಿಯಾ ಸುಲ್ತಾನಾ ಪ್ರಸಿದ್ಧಳಾಗಿದ್ದಾಳೆ.ಏಕೆ ?

______________________________________________

20.ರಾಮಾನುಜಾಚಾರ್ಯರ ಶಿಷ್ಯರನ್ನು ಏನೆಂದು ಕರೆಯಲಾಗಿದೆ?

______________________________________________

21.'ಕಾಯಕವೇ ಕೈಲಾಸ'ಎಂದು ಕಾಯಕತತ್ವದ ಮಹತ್ವವನ್ನು ಸಾರಿದವರು ಯಾರು?

______________________________________________

22.'ತರುಣ ಇಟಲಿ' ಎಂಬ ಪಕ್ಷವನ್ನು ಇಟಲಿಯಲ್ಲಿ ಕಟ್ಟಿದವರು ಯಾರು ?

______________________________________________

23.ಪ್ರವಾದಿ ಮೊಹಮ್ಮದ್ ಪೈಗಂಬರರ ತಂದೆ ತಾಯಿ ಯಾರು?

______________________________________________

24.ರಾಷ್ಟ್ರೀಯ ಭಾವೈಕ್ಯತೆ ಎಂದರೇನು?

______________________________________________

______________________________________________

25.ಎಕ್ಸಿಂ ಬ್ಯಾಂಕಿನ ಕೆಲಸವೇನು ?

______________________________________________

______________________________________________

26.ಬಾಲಕಾರ್ಮಿಕ ಎಂದರೇನು ?

______________________________________________

______________________________________________

27.ಕರ್ನಾಟಕದಲ್ಲಿ ಬೆಳೆಯುವ ಪ್ರಮುಖ ಆಹಾರ ಬೆಳೆಗಳು ಯಾವುವು?

______________________________________________

______________________________________________

28.ಜನಸಾಂದ್ರತೆ ಎಂದರೇನು?

______________________________________________

______________________________________________

29.ಕರ್ನಾಟಕದಲ್ಲಿ ಹೆಚ್ಚು ಸಾಕ್ಷರತೆಯನ್ನು ಹೊಂದಿರುವ ಜಿಲ್ಲೆ ಯಾವುದು ? __________________

30.ಸಾಮಾಜೀಕರಣ ಎಂದರೇನು ?

---

**V.ಕೆಳಗಿನ ಪ್ರಶ್ನೆಗಳಿಗೆ ಎರಡರಿಂದ ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.** 15**x**2=30

31.ಅಸಂಪ್ರದಾಯಿಕ ಮಾರುಕಟ್ಟೆಗಳ ಯಾವುದಾದರು ನಾಲ್ಕು ಬಗೆಗಳನ್ನು ತಿಳಿಸಿ.

---

32.ನಿಯಂತ್ರಣವು ನಿರ್ವಹಣಾ ಕಾರ್ಯದಲ್ಲಿ ಬಹುಮುಖ್ಯವಾದುದು.ಹೇಗೆ?

---

33.ವಿಜಯ ನಗರದ ಅರಸರು ಧಾರ್ಮಿಕ ಸಹಿಷ್ಣುಗಳಾಗಿದ್ದರು.ಸಮರ್ಥಿಸಿ.

---

34.ರಜಪೂತರ ಮನೆತನಗಳನ್ನು ಹೆಸರಿಸಿ.

---

35.ಊಳಿಗಮಾನ್ಯ ಪದ್ಧತಿಯ ಪತನಕ್ಕೆ ಕಾರಣಗಳನ್ನು ತಿಳಿಸಿ.

---

36.ಕಬೀರರ ಬೋಧನೆಗಳನ್ನು ಬರೆಯಿರಿ.

---

37.ಫ್ರಾನ್ಸಿನ ಮಹಾಕ್ರಾಂತಿಯ ಪರಿಣಾಮಗಳನ್ನು ತಿಳಿಸಿ.

38.ನಗರ ಸ್ವರೂಪದ ಯಾವುದಾದರು 4 ಲಕ್ಷಣಗಳನ್ನು ತಿಳಿಸಿ.

39.ಸಾಮಾಜೀಕರಣದ ನಿಯೋಗಿಗಳನ್ನು ಪಟ್ಟಿಮಾಡಿ.

40.ನಮ್ಮ ರಕ್ಷಣಾ ಪಡೆಗಳು ಅಂತರರಾಷ್ಟ್ರೀಯ ಶಾಂತಿ ಸ್ಥಾಪನಾ ಕಾರ್ಯಗಳಲ್ಲಿ ಪ್ರಮುಖ ಪಾತ್ರ ವಹಿಸಿವೆ. ಸಮರ್ಥಿಸಿ.

41.ರಾಜ್ಯ ವಿಧಾನಪರಿಷತ್ ಸದಸ್ಯರು ಯಾವ ಯಾವ ಕ್ಷೇತ್ರ ಗಳನ್ನು ಪ್ರತಿನಿಧಿಸುತ್ತಾರೆ?

42.ನಮ್ಮ ನೆರೆಯ ರಾಜ್ಯಗಳನ್ನು ಹೆಸರಿಸಿ.

43.ರಸ್ತೆ ಸಾರಿಗೆಯು ಪ್ರಾಮುಖ್ಯತೆಯನ್ನು ಪಡೆದಿದೆ.ಹೇಗೆ?

44.ಕೈಗಾರಿಕಾ ವಲಯವು ಅರ್ಥವ್ಯವಸ್ಥೆಯಲ್ಲಿ ಹೆಚ್ಚು ಪ್ರಾಮುಖ್ಯತೆಯನ್ನು ಹೊಂದಿದೆ.ಸಮರ್ಥಿಸಿ.

45.ಪುರಾತನ ಅರ್ಥ ವ್ಯವಸ್ಥೆಯ ಲಕ್ಷಣಗಳನ್ನು ತಿಳಿಸಿ.

**VI.ಕೆಳಗಿನ ಪ್ರಶ್ನೆಗಳಿಗೆ ಆರರಿಂದ ಎಂಟು ವಾಕ್ಯಗಳಲ್ಲಿ ಉತ್ತರಿಸಿ.** 6**x**3=18

46.ಜೀಸಸ್ ಕ್ರಿಸ್ತರ ಬೋಧನೆಗಳನ್ನು ವಿವರಿಸಿ

47. ಭಾರತೀಯ ರಿಸರ್ವ್ ಬ್ಯಾಂಕಿನ ಕಾರ್ಯಗಳನ್ನು ವಿವರಿಸಿ.

48. ಭಾರತದ ಸಂವಿಧಾನದ ಪ್ರಮುಖ ಲಕ್ಷಣಗಳನ್ನು ತಿಳಿಸಿ.

49. ವ್ಯವಹಾರ ಶಾಸ್ತ್ರದಲ್ಲಿ ಲೆಕ್ಕ ಬರಹವು ಅತ್ಯಂತ ಉಪಯುಕ್ತವಾದುದೆಂದು ಹೇಗೆ ಸಮರ್ಥಿಸುವಿರಿ.

50. ಅವಿಭಕ್ತ ಕುಟುಂಬದ ಲಕ್ಷಣಗಳನ್ನು ತಿಳಿಸಿ.

51. ಬೆಂಗಳೂರಿನಲ್ಲಿ ಮಾಹಿತಿ ತಂತ್ರಜ್ಞಾನ ಕೈಗಾರಿಕೆಗಳು ಕೇಂದ್ರೀಕೃತವಾಗಿವೆ. ಕಾರಣಗಳೇನು?

**VII. ಕೆಳಗಿನ ಪ್ರಶ್ನೆಗೆ ಎಂಟರಿಂದ ಹತ್ತು ವಾಕ್ಯಗಳಲ್ಲಿ ಉತ್ತರಿಸಿ.** **1x4=4**

52. ಇವುಗಳನ್ನು ಕುರಿತು ಬರೆಯಿರಿ.

a) ಕೈಗಾರಿಕಾಕ್ರಾಂತಿಯ ಪರಿಣಾಮಗಳು:

b) ಪುನರುಜ್ಜೀವನ ಚಳುವಳಿಯ ಪರಿಣಾಮಗಳು :

---------------------------------------------------------------------

---------------------------------------------------------------------

**VIII.**

**53.ಕರ್ನಾಟಕದ ನಕ್ಷೆಯನ್ನು ಬರೆದು ಈ ಕೆಳಗಿನ ಸ್ಥಳಗಳನ್ನು ಗುರುತಿಸಿ.** **1+3=4**

a)ಕರಾವಳಿ ಮೈದಾನ b)ಕೋಲಾರ(K.G.F.) c)ಖಾನಾಪುರ

**ಸರ್ಕಾರಿ ಪ್ರೌಢಶಾಲೆ ಚಿಕ್ಕಜಾಲ ಬೆಂಗಳೂರು ಉತ್ತರ ವಲಯ –04**
**ಸಂಕಲನಾತ್ಮಕ ಮೌಲ್ಯಮಾಪನ–02,2016 ಮಾರ್ಚ್ ಮೌಖಿಕ ಪ್ರಶ್ನಾವಳಿಗಳು**

1.ದ್ವೈತ ಸಿದ್ಧಾಂತದ ಪ್ರತಿಪಾದಕರು ಯಾರು?
2.ವಿಜಯನಗರ ಸಾಮ್ರಾಜ್ಯದ ಸ್ಥಾಪಕರು ಯಾರು?
3.ಅಮುಕ್ತ ಮೌಲ್ಯದ  ಕೃತಿಯನ್ನು ರಚಿಸಿದವರು ಯಾರು?
4.ಪುನರುಜ್ಜೀವನ ಚಳುವಳಿಯು ಆರಂಭವಾಗಿದ್ದು ಎಲ್ಲಿ?
5.ಭಾರತಕ್ಕೆ ಜಲಮಾರ್ಗವನ್ನು ಕಂಡುಹಿಡಿದವರು ಯಾರು?
6.ಭೂ ಅನ್ವೇಷಣೆಗೆ ಪ್ರೋತ್ಸಾಹಿಸಿದ ದೇಶಗಳು ಯಾವುವು?
7.ವಿಭಕ್ತ ಕುಟುಂಬ ಎಂದರೇನು?
8.ಮಾತೃ ಪ್ರಧಾನ ಕುಟುಂಬ ಎಲ್ಲಿ ಕಂಡು ಬರುತ್ತದೆ?
9.ಕೈಗಾರಿಕೀಕರಣವು ಯಾವುದನ್ನು ಸೂಚಿಸುತ್ತದೆ?
10.ಕರ್ನಾಟಕದ ವಿಸ್ತೀರ್ಣ ಎಷ್ಟು?

---

11.ಕರ್ನಾಟಕದ ಕಾಶ್ಮೀರ ಎಂದು ಕರೆಯುವ ಜಿಲ್ಲೆ ಯಾವುದು?
12.ಕರ್ನಾಟಕದಲ್ಲಿ ಎಷ್ಟು ರಾಷ್ಟ್ರೀಯ ಹೆದ್ದಾರಿಗಳು ಹಾದು ಹೋಗುತ್ತವೆ?
13.ಜಲಪಾತಗಳ ತವರು ಎಂದು ಕರೆಯಲ್ಪಡುವ ಜಿಲ್ಲೆ ಯಾವುದು?
14.ಸಿಲಿಕಾನ್ ಕಣಿವೆ ಎಂದು ಕರೆಯಲ್ಪಡುವ ನಗರ ಯಾವುದು?
15.ಕರ್ನಾಟಕದ ಪ್ರಮುಖ ನದಿಗಳನ್ನು ಹೆಸರಿಸಿ.
16.ಭಾರತೀಯ ರಿಸರ್ವ್ ಬ್ಯಾಂಕ್ ಸ್ಥಾಪನೆಯಾಗಿದ್ದು ಯಾವಾಗ?
17.ಉತ್ಪಾದಕ ಚಟುವಟಿಕೆಗಳು ಯಾವ ವಲಯದಲ್ಲಿ ಬರುತ್ತವೆ?
18.ಭಾರತದಲ್ಲಿ ಮೊಟ್ಟ ಮೊದಲ ಷೇರು ಮಾರುಕಟ್ಟೆ ಎಲ್ಲಿ ಆರಂಭವಾಯಿತು?
19.ಗ್ರಾಹಕ ರಕ್ಷಣೆ ಎಂದರೇನು?
20.ಲೆಕ್ಕ ಬರಹ ಎಂದರೇನು?

## ಸಂಕಲನಾತ್ಮಕ ಮೌಲ್ಯಮಾಪನ-02,ಮೌಖಿಕ ಪ್ರಶ್ನಾವಳಿಗಳ ಮಾದರಿ ಉತ್ತರಗಳು

1.ಮಧ್ವಾಚಾರ್ಯರು

2.ಹರಿಹರ ಮತ್ತು ಬುಕ್ಕರಾಯ

3.ಕೃಷ್ಣದೇವರಾಯ

4.ಇಟಲಿ

5.ವಾಸ್ಕೋ-ಡ-ಗಾಮ

6.ಪೋರ್ಚುಗಲ್ ಮತ್ತು ಸ್ಪೈನ್ ದೇಶಗಳು

7.ತಂದೆ ತಾಯಿ ಮತ್ತು ಅವರ ಅವಿವಾಹಿತ ಮಕ್ಕಳನ್ನೊಂದಿರುವ ಕುಟುಂಬವನ್ನು ವಿಭಕ್ತ ಕುಟುಂಬ ಎನ್ನುವರು.

8.ಕೇರಳದ ನಾಯರ್ ಗಳಲ್ಲಿ ಮತ್ತು ಈಶಾನ್ಯ ರಾಜ್ಯಗಳ ಆದಿವಾಸಿಗಳಲ್ಲಿ ಮಾತೃ ಪ್ರಧಾನ ಕುಟುಂಬ ಕಂಡುಬರುತ್ತದೆ.

9.ಕೈಗಾರಿಕೀಕರಣವು ತಯಾರಿಕಾ ಉದ್ಯಮದ ಬೆಳವಣಿಗೆಯನ್ನು ಸೂಚಿಸುತ್ತದೆ.

10.1,91,791 ಚ.ಕಿ.ಮೀ.

---

11.ಕೊಡುಗು ಜಿಲ್ಲೆಯನ್ನು ಕರ್ನಾಟಕದ ಕಾಶ್ಮೀರ ಎಂದು ಕರೆಯುವರು.

12.14 ರಾಷ್ಟ್ರೀಯ ಹೆದ್ದಾರಿಗಳು

13.ಉತ್ತರ ಕನ್ನಡ ಜಿಲ್ಲೆ.

14.ಬೆಂಗಳೂರು

15.ಕಾವೇರಿ,ಕೃಷ್ಣಾ,ಪನ್ನಾರ್ ,ಶರಾವತಿ,ಕಾಳಿ,ನೇತ್ರಾವತಿ,ವಾರಾಹಿ,ಅಘನಾಶಿನಿ ಮುಂತಾದವು.

16.1935

17.ದ್ವಿತೀಯ ವಲಯ

18.ಮುಂಬೈ

19.ಗ್ರಾಹಕರನ್ನು ಉತ್ಪಾದಕರು ಮತ್ತು ವ್ಯಾಪಾರಿಗಳ ಶೋಷಣೆಯಿಂದ ರಕ್ಷಿಸಲು ಕೈಗೊಂಡಿರುವ ಕಾರ್ಯಗಳನ್ನು ಗ್ರಾಹಕರ ರಕ್ಷಣೆ ಎನ್ನುವರು.

20.ವ್ಯವಹಾರದ ಫಲಿತಾಂಶಗಳನ್ನು ತಿಳಿದು ಕೊಳ್ಳಲು ವ್ಯವಹಾರದ ವಹಿವಾಟುಗಳನ್ನು ಕ್ರಮಬದ್ಧವಾಗಿ ದಾಖಲೆ ಮಾಡುವ ವಿಧಾನಕ್ಕೆ ಲೆಕ್ಕಬರಹ ಎನ್ನವರು.